

# ಕೊರೊನೋತ್ತರ ಆಪತ್ತು

ಕೋವಿಡ್–19 ಆರೋಗ್ಯ ಕ್ಷೇತ್ರಕ್ಕೆ ಅಂಟಿದ ಅಭಿಶಾಪ. ಕೊರೊನಾ ಸೋಂಕು ತಗುಲಿ ಗುಣಮುಖರಾದ ಮೇಲೂ ಹಲವು ರೀತಿ ಸಮಸ್ಯೆಗಳು ಬಾಧಿಸಿ ಕೊರೊನೋತ್ತರದಲ್ಲಿ ಆರೋಗ್ಯದ ಮೇಲೆ ಮತ್ತಷ್ಟು ನಿಗಾ ಇಡುವಂತೆ ಮಾಡುತ್ತಿದೆ. ಕೊರೊನಾ ನಂತರವೂ ಆರೋಗ್ಯ ಸಮಸ್ಯೆ ಕಾಣಿಸಿಕೊಳ್ಳುವುದನ್ನು ವಿಶ್ವದಾದ್ಯಂತ ತಜ್ಞರು, ಸಂಶೋಧಕರು ಗುರುತಿಸಿದ್ದಾರೆ. ಚಿಕಿತ್ಸೆ ಪಡೆದು ಮನೆಗೆ ಮರಳಿದ ಬಳಿಕ ಕಾಡುವ ಸಮಸ್ಯೆಗಳೇನು? ಇದರ ಬಗ್ಗೆ ಯಾವ ರೀತಿ ಮುನ್ನೆಚ್ಚರಿಕೆ ಅಗತ್ಯ ಎಂಬುದನ್ನು ಹೃದ್ರೋಗ, ಮಧುಮೇಹ ಹಾಗೂ ಸ್ತ್ರೀರೋಗ ತಜ್ಞ ವೈದ್ಯರು ಇಲ್ಲಿ ವಿಶ್ಲೇಷಿಸಿದ್ದಾರೆ.

**■ ಉಮಾ ಅನಂತ್**

ಐವತ್ತೇಳರ ಹರೆಯದ ಬೆಂಗಳೂರಿನ ಜಗನ್ನಾಥ ರಾವ್ ಬ್ಯಾಂಕ್ ಉದ್ಯೋಗಿ. ನಿವೃತ್ತಿಯ ಅಂಚಿಗೆ ಬಂದಾಯಿತು. ಸ್ವಯಂನಿವೃತ್ತಿ ಪಡೆಯುವ ಯೋಚನೆ ಬಂದು ಅರ್ಜಿಯೂ ಸಲ್ಲಿಸಿಯಾಗಿತ್ತು. ಇದೇ ಸಮಯಕ್ಕೆ ಅವರನ್ನು ಕೊರೊನಾ ಸೋಂಕು ತಗುಲಿ ಆಸ್ಪತ್ರೆ ಸೇರುವಂತಾಯಿತು. ಐಸಿಯು ನಲ್ಲಿದ್ದು ಚಿಕಿತ್ಸೆ ಪಡೆದ ಇವರು, ಸಂಪೂರ್ಣ ಗುಣಮುಖರಾಗಿ ಮನೆಗೆ ತೆರಳಿದರು. ಅದಾಗಿ ಎರಡೇ ವಾರಕ್ಕೆ ಮತ್ತೆ ತಲೆನೋವು, ನರದೌರ್ಬಲ್ಯ ಇವರನ್ನು ನಿರಂತರವಾಗಿ ಕಾಡಿದ್ದಲ್ಲದೆ ಬದುಕೇ ಬೇಡವೆನಿಸಿತ್ತು. ಇದು ಕೊರೊನಾ ನಂತರದ ದುಷ್ಪರಿಣಾಮ ಎಂಬುದನ್ನು ವೈದ್ಯರು ಖಚಿತಪಡಿಸಿದರು.

ಜಗತ್ತಿನಾದ್ಯಂತ ಇಡೀ ಮನುಕುಲವನ್ನು ಕಳೆದ ಒಂದು ವರ್ಷದಿಂದ ಕಾಡಿ ಹಿಂಡಿಹಿಪ್ಪೆ ಮಾಡಿದ ಕೊರೊನಾ ಸೋಂಕು ತನ್ನ ಆರ್ಭಟವನ್ನು ಕೊಂಚ ಕಡಿಮೆ ಮಾಡಿದರೂ ಕೊರೊನೋತ್ತರದಲ್ಲಿ